# ನಮಗೆಷ್ಟು ಅನುವಾದಗಳು ಬೇಕು?

ಈಚಿನ ವರ್ಷಗಳಲ್ಲಿ ಅನುವಾದಿತ ಪುಸ್ತಕಗಳು ಅಪಾರ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ಹಾಗೆ ಪ್ರಕಟವಾಗುವ ಅನೇಕ ಅನುವಾದಗಳಿಗೆ ಇಂಗ್ಲಿಷ್ ಹೆಬ್ಬಾಗಿಲು. ನೆರೆಯ ಭಾಷೆಗಳಿಂದಲೂ ಕನ್ನಡಕ್ಕೆ ಆಗುತ್ತಿರುವ ಅನುವಾದ ಕಡಿಮೆ ಏನಲ್ಲ. ಸರ್ಕಾರಿ ಮತ್ತು ಖಾಸಗಿ ಪ್ರಕಟಣಾ ಸಂಸ್ಥೆಗಳು ಈ ಕಾಯಕದಲ್ಲಿ ಬಹುಕಾಲದಿಂದ ತೊಡಗಿಕೊಂಡಿವೆ. ಪ್ರತಿ ವರ್ಷ ಏರುತ್ತಿರುವ ಈ ಪುಸ್ತಕ ರಾಶಿಯ ನಡುವೆ ಯಾವುದನ್ನು ಆಯಬೇಕು ಎಂಬ ಗೊಂದಲ ಸಹಜ. ಮತ್ತು ಈ ಎಲ್ಲ ಅನುವಾದಗಳು ಅಗತ್ಯವೇ? ನಮಗೆಷ್ಟು ಅನುವಾದಗಳು ಬೇಕು? ಎಂಬ ಪ್ರಶ್ನೆಗಳೂ ಓದುಗರಲ್ಲಿ ಇದ್ದೇ ಇರುತ್ತವೆ. ಕನ್ನಡದ್ದೇ ಆದ ಮೂಲಕೃತಿಯನ್ನಾಗಿ ನೋಡಲಾಗದ, ಅನ್ಯವಾಗಿಯೇ ಉಳಿದುಬಿಡುವ ಈ ಭಾಷಾಂತರ ಕೃತಿಗಳ ಇತಿಮಿತಿ ಏನು ಎಂಬ ಪ್ರಶ್ನೆಯೂ ಸಹ ಇದೇ ವೇಳೆ ಎದುರಾಗುತ್ತದೆ.

ಸಾಹಿತ್ಯ ಕೃತಿಗಳ ಸಂದರ್ಭದಲ್ಲಂತೂ ಉತ್ತಮವಾದುದು ಇಲ್ಲಿದೆ ಎಂದು ಅನುವಾದಗಳು ಓದುಗರಿಗೆ ಸೂಚಿಸುತ್ತಿರುತ್ತವೆ. ಹಾಗೆ ಗಮನ ಸೆಳೆಯುವುದು, ಉತ್ತಮವಾದುದನ್ನು ಓದುಗರಿಗೆ ಕೊಡುವುದು ಕುಶಲ ಭಾಷಾಂತರಕಾರರ ಮೂಲಭೂತ ಉದ್ದೇಶವೂ ಕರ್ತವ್ಯವೂ ಆಗಿರುತ್ತದೆ; ಆಗಿರಬೇಕು. ಹಾಗೆ ಓದಿಸಿಕೊಳ್ಳುವಂತಹ ತರ್ಜುಮೆಗಳು ಬಂದರೆ ಅದು ನಾಡಿನ, ನಾಡವರ ಪುಣ್ಯವೇ ಸರಿ! ಏಕೆಂದರೆ ಅನೇಕ ಸಾಹಿತ್ಯ ಕೃತಿಗಳ ತರ್ಜುಮೆಗಳು ಮೂಲವನ್ನು 'ಮುಟ್ಟಿನೋಡಿಕೊಳ್ಳುವಂತೆ' ಓದುಗರನ್ನು ಪ್ರೇರೇಪಿಸದೇ ಇರುವುದಿಲ್ಲ. ಹಾಗಾಗಿಯೇ ಕನ್ನಡಕ್ಕೆ ಬಂದ ಬಹಳಷ್ಟು ಅನುವಾದಿತ ಕೃತಿಗಳು ಬಹುಕಾಲ ನಿಲ್ಲದೇ ತೀರಿಕೊಂಡಿವೆ. ಇಂತಹ ಕೃತಿಗಳ ಆಯುಷ್ಯ ಬಹಳ ಕಿರಿದು. ಕಾಲಕ್ಕೆ ಬದ್ಧವಾದ, ತಮ್ಮನ್ನು ತಾವು ಮೀರಲಾಗದ ಕೃತಿಗಳು ಅವು. ಆದ್ದರಿಂದಲೇ ಕಾಲಕ್ಕೆ ತಕ್ಕಂತೆ, ನಮಗೆ ಬೇಕಾದ ಅನುವಾದಗಳನ್ನು ಮಾಡಿಕೊಳ್ಳುತ್ತಲೇ ಇರಬೇಕಾಗುತ್ತದೆ. ಅದು ಒಂದು ಭಾಷೆಯ ಜೀವಂತಿಕೆಯ ಲಕ್ಷಣವೂ ಹೌದು.



ತರ್ಜುಮೆಗಳು ಇನ್ನೊಂದು ಸಹಾಯವನ್ನು ಓದುಗರಿಗೆ ಮಾಡುತ್ತವೆ. ಅವು ದೊಡ್ಡ ಲೇಖಕರ ಕೃತಿಗಳ ಕಡೆಗೆ ಓದುಗರ ಗಮನ ಸೆಳೆಯುತ್ತವೆ. ಅವರನ್ನು ಹುಡುಕಿಕೊಂಡು ಹೋಗಿ ಓದುವಂತೆ ಒತ್ತಾಯಿಸುತ್ತವೆ. ಹಾಗೆ ಮಾಡುವುದು ಉತ್ತಮ ಅನುವಾದ ಮಾಡಬಹುದಾದ ಕೆಲಸವೇ ಆಗಿದೆ. ಹಾಗೆ ನೋಡಿದರೆ ನಾವು ಓದುವ ಸಾಹಿತ್ಯ ಕೃತಿಗಳು ಆಯಾ ಲೇಖಕನ ಸಂವೇದನೆಗಳ ಮುಕ್ಕಾದ ತರ್ಜುಮೆಯೇ ಅಲ್ಲವೇ?

ಈ ಉದ್ಯಮದಲ್ಲಿ ಗಂಭೀರವಾಗಿ ತೊಡಗಿಕೊಂಡವರು ಅನುವಾದದ ಒಟ್ಟೂ ಸ್ವರೂಪದ ಬಗ್ಗೆ ತಮ್ಮ ಅನುಭವ, ಗ್ರಹಿಕೆಯ ಹಿನ್ನೆಲೆಯಲ್ಲಿ ಬರೆದ ಬರಹಗಳು 'ಅನುವಾದ ಸಂವಾದ'ದಲ್ಲಿವೆ. ಜೊತೆಗೆ ಮಕ್ಕಳ ಕತೆ, ಕವಿತೆಗಳನ್ನು ಕೊಡಲಾಗಿದೆ. ಶಿಶು ಗೀತೆಗಳ ಕುರಿತ ಎಚ್.ಎಸ್. ವೆಂಕಟೇಶಮೂರ್ತಿ ಅವರ ಬರಹವೂ ಈ ಸಂಚಿಕೆಯಲ್ಲಿದೆ. ಅನುವಾದ, ಮಕ್ಕಳ ಸಾಹಿತ್ಯ ಭಾಷೆಯ ಬೆಳವಣಿಗೆಯಲ್ಲಿ ಎಷ್ಟು ಮುಖ್ಯ ಎಂಬುದನ್ನು ಎಲ್ಲರೂ ಬಲ್ಲರು. ಆದ್ದರಿಂದಲೇ ಇವು ನವೆಂಬರ್ ಸಂಚಿಕೆಯ ವಿಶೇಷಗಳಾಗಿವೆ.

**ಸಂದೀಪ ನಾಯಕ**